ಮೆ: ಶ್ರೀ ಅಶೋಕ ಆರ್.ಕೆ. ಇವರು ಮರಳು ಗಣಿಗಾರಿಕೆ ವಲಯ BLY-OSB-14- ರಲ್ಲಿ ಸರ್ವೆ ನಂ-167(ಭಾಗ) ಬಾಣಪುರ ಗ್ರಾಮ, ಸರ್ವೆ ನಂ-265(ಭಾಗ), ಬೆಣಕಲ್ಲು ಗ್ರಾಮ, ಸರ್ವೆ ನಂ-260(ಭಾಗ), ಸಿಂಧವಾಳ ಗ್ರಾಮ , ಮತ್ತು ಸರ್ವೆ ನಂ- 190 (ಭಾಗ), ವಣೇನೂರು ಗ್ರಾಮ, ಬಳ್ಳಾರಿ ತಾಲ್ಲೂಕ ಮತ್ತು ಜಿಲ್ಲೆಯ ಹಗರಿ ನದಿ ತೀರದಲ್ಲಿ ಒಟ್ಟು 25.00 ಎಕರೆ (10.12 ಹೆಕ್ಟರ್) ಪ್ರದೇಶದಲ್ಲಿ ವರ್ಷಕ್ಕೆ 45,817 ಟನ್‌ಗಳಷ್ಟು ನದಿ ಮರಳು ಗಣಿಗಾರಿಕೆಯನ್ನು ಮಾಡುವ ಉದ್ದೇಶಕ್ಕಾಗಿ (ಯೋಜನಾ ಪ್ರದೇಶದಲ್ಲಿ) ದಿನಾಂಕ: 14-09-2021 ರಂದು **ಬೆಳಗ್ಗೆ** 11.00 ಗಂಟೆಗೆ ನಡೆದ ಪರಿಸರ ಸಾರ್ವಜನಿಕ ಸಭೆಯ ನಡುವಳಿಗಳು:-

| | | |
|---|---|---|
| ಪರಿಸರ ಕುರಿತಾದ ಸಾರ್ವಜನಿಕ ಆಲಿಕೆ ಸಭೆಯ ಸ್ಥಳ | | ಉದ್ದೇಶಿತ ಯೋಜನಾ ಸ್ಥಳ: ಮರಳು ಗಣಿಗಾರಿಕೆ ವಲಯ BLY-OSB-14- ರಲ್ಲಿ ಸರ್ವೆ ನಂ-167(ಭಾಗ) ಬಾಣಪುರ ಗ್ರಾಮ, ಸರ್ವೆ ನಂ-265(ಭಾಗ), ಬೆಣಕಲ್ಲು ಗ್ರಾಮ, ಸರ್ವೆ ನಂ-260(ಭಾಗ), ಸಿಂಧವಾಳ ಗ್ರಾಮ , ಮತ್ತು ಸರ್ವೆ ನಂ- 190 (ಭಾಗ), ವಣೇನೂರು ಗ್ರಾಮ, ಬಳ್ಳಾರಿ ತಾಲ್ಲೂಕ ಮತ್ತು ಜಿಲ್ಲೆಯ ಹಗರಿ ನದಿ ತೀರದಲ್ಲಿ |
| ಹಾಜರಿದ್ದ ಪರಿಸರ ಸಾರ್ವಜನಿಕ ವಿಚಾರಣಾ ಸಮಿತಿಯ ಸದಸ್ಯರುಗಳ ವಿವರ | | **ಪದನಾಮ** |
| 1. | ಪಿ.ಎಸ್.ಮಂಜುನಾಥ, ಕ.ಆ.ಸೇ(ಹಿರಿಯ ಶ್ರೇಣಿ), ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ಬಳ್ಳಾರಿ ಜಿಲ್ಲೆ | **ಅಧ್ಯಕ್ಷರು** |
| 2 | ಶ್ರೀ ಕೆ.ರಾಜು, ಹಿರಿಯ ಪರಿಸರಅಧಿಕಾರಿಗಳು (ಪ್ರಭಾರ), ಕ.ರಾ.ಮಾ.ನಿ.ಮಂ. ವಲಯ ಕಛೇರಿ, ಬಳ್ಳಾರಿ. | **ಸದಸ್ಯರು** |
| 3. | ಶ್ರೀ ಉಮಾಶಂಕರ್ ಪಿ. ಕೆ, ಪರಿಸರ ಅಧಿಕಾರಿ, ಕ.ರಾ.ಮಾ.ನಿ.ಮಂ. ಬಳ್ಳಾರಿ. | **ಸದಸ್ಯ ಸಮಾವೇಷಕರು** |
| **ಹಾಜರಿದ್ದ ಇತರ ಅಧಿಕಾರಿಗಳ ವಿವರ** | | |
| 1 | ಶ್ರೀ ಕಿರಣ್ ಕುಮಾರ್ ಜಿ.ಆರ್. ಉಪ ಪರಿಸರ ಅಧಿಕಾರಿ.ಕ.ರಾ.ಮಾ.ನಿ.ಮಂ.ಪ್ರಾ.ಕ, ಬಳ್ಳಾರಿ | |
| 2 | ಶ್ರೀ ಹನುಮಂತಪ್ಪ ಹೆಚ್. ಸಹಾಯಕ ಪರಿಸರ ಅಧಿಕಾರಿ, ಕ.ರಾ.ಮಾ.ನಿ.ಮಂ.ಪ್ರಾಕ, ಬಳ್ಳಾರಿ | |
| 3 | ಶ್ರೀ ಪವನ್ ಎಸ್, ಸಹಾಯಕ ಪರಿಸರ ಅಧಿಕಾರಿ, ಕ.ರಾ.ಮಾ.ನಿ.ಮಂ. ಪ್ರಾಕ, ಬಳ್ಳಾರಿ | |
| **ಹಾಜರಿದ್ದ ಇತರ ಅಧಿಕಾರಿಗಳ ವಿವರ** | | |
| 1 | ಶ್ರೀ ಕೆ.ಎಸ್. ನಾಗೇಂದ್ರಪ್ಪ, ಹಿರಿಯ ಭೂ-ವಿಜ್ಞಾನಿ, ಗಣಿ ಮತ್ತು ಭೂ-ವಿಜ್ಞಾನ ಇಲಾಖೆ, ಬಳ್ಳಾರಿ | |
| 2 | ಶ್ರೀ ಪ್ರವೀಣ ಜೋಷಿ, ಭೂ-ವಿಜ್ಞಾನಿ, ಗಣಿ ಮತ್ತು ಭೂ-ವಿಜ್ಞಾನ ಇಲಾಖೆ, ಬಳ್ಳಾರಿ | |
| 3 | ಶ್ರೀ ಕೆ. ಶ್ರೀನಿವಾಸ ರಾಜಪ್ಪ ನೀರಿಕ್ಷಕರು, ಮೋಕ | |

| | |
|---|---|
| 4 | ಶ್ರೀ ಮರಿಸ್ವಾಮಿ ಡಿ, ಪಂಚಾಯತ ಅಭಿವೃದ್ಧಿ ಅಧಿಕಾರಿ, (ವಣೇನೂರು & ಯರಗುಡಿ) |
| 5 | ಶ್ರೀ ಇ. ತಿಪ್ಪಯ್ಯ ಗ್ರಾಮ ಲೆಕ್ಕಿಕರು, ಬಾಣಾಪುರ |
| 6 | ಶ್ರೀ ಎಲ್.ಗಿರಿಯಪ್ಪ, ಗ್ರಾಮ ಲೆಕ್ಕಿಕರು, ಬೆಣಕಲ್ಲು |
| 7 | ಶ್ರೀ ಶಶಿಕುಮಾರ, ಗ್ರಾಮ ಲೆಕ್ಕಿಕರು, ಸಿಂಧವಾಳ |
| 8 | ಶ್ರೀ ಮಲ್ಲಿಕಾರ್ಜುನ ಗ್ರಾಮ ಸಹಾಯಕ, ವಣೇನೂರು |
| ಮೆ: ಶ್ರೀ ಅಶೋಕ ಆರ್.ಕೆ. ಮರಳು ಗಣಿಗಾರಿಕೆಯ ವತಿಯಿಂದ ಹಾಜರಿದ್ದ ಪ್ರತಿನಿಧಿಗಳು. | |
| 1. | ಶ್ರೀ ಬಿ. ವಿಜಯರೆಡ್ಡಿ |
| 2. | ಶ್ರೀ ಅಶೋಕ ಆರ್.ಕೆ. |
| 3. | ಶ್ರೀ ವಿನಯಕುಮಾರ ಪಿ.ಟಿ. |
| 4. | ಶ್ರೀ ಸೋಮಶೇಕರ, ಪಿ.ಎಂ. |
| 5 | ಶ್ರೀ ಸಚೀನ ಎಂ.ವಿ. ಮೆ. ಹೊರಿಜನ್ ವೆಂಚರ್ಸ್ ಬೆಂಗಳೂರು |
| 6 | ಶ್ರೀ ಅರುಣ ಪಿ. ಮೆ. ಹೊರಿಜನ್ ವೆಂಚರ್ಸ್ ಬೆಂಗಳೂರು |
| 1. ಪರಿಸರ ಸಾರ್ವಜನಿಕ ಆಲಿಕೆ ಸಭೆಗೆ ಭಾಗವಹಿಸಿದ ಅಧಿಕಾರಿಗಳ ಸಹಿ ಇರುವ ಹಾಜರಾತಿ ವಹಿಯ ಪ್ರತಿಯನ್ನು **ಅನುಬಂಧ-1** ರಲ್ಲಿ ಲಗತ್ತಿಸಲಾಗಿದೆ.<br>2. ಪರಿಸರ ಸಾರ್ವಜನಿಕ ಆಲಿಕೆ ಸಭೆಗೆ ಭಾಗವಹಿಸಿದ ಸಾರ್ವಜನಿಕರ ವಿಳಾಸ ಮತ್ತು ಸಹಿ ಇರುವ ಹಾಜರಾತಿ ವಹಿಯ ಪ್ರತಿಯನ್ನು **ಅನುಬಂಧ-2** ರಲ್ಲಿ ಲಗತ್ತಿಸಲಾಗಿದೆ. | |

**ಪೀಠಿಕೆ:**

ಶ್ರೀ ಅಶೋಕ ಆರ್.ಕೆ. ಇವರು ಮರಳು ಗಣಿಗಾರಿಕೆ ವಲಯ BLY-OSB-14- ರಲ್ಲಿ ಸರ್ವೆ ನಂ-167(ಭಾಗ) ಬಾಣಪುರ ಗ್ರಾಮ, ಸರ್ವೆ ನಂ-265(ಭಾಗ), ಬೆಣಕಲ್ಲು ಗ್ರಾಮ, ಸರ್ವೆ ನಂ-260(ಭಾಗ), ಸಿಂಧವಾಳ ಗ್ರಾಮ, ಮತ್ತು ಸರ್ವೆ ನಂ- 190 (ಭಾಗ), ವಣೇನೂರು ಗ್ರಾಮ, ಬಳ್ಳಾರಿ ತಾಲ್ಲೂಕ ಮತ್ತು ಜಿಲ್ಲೆಯ ಹಗರಿ ನದಿ ತೀರದಲ್ಲಿ ಒಟ್ಟು 25.00 ಎಕರೆ (10.12 ಹೆಕ್ಟರ್) ಪ್ರದೇಶದಲ್ಲಿ ವರ್ಷಕ್ಕೆ 45,817 ಟನ್‌ಗಳಷ್ಟು ನದಿ ಮರಳು ಗಣಿಗಾರಿಕೆಯನ್ನು ಮಾಡುವ ಉದ್ದೇಶಕ್ಕಾಗಿ ಪ್ರಸ್ತಾವನೆಯ ಮಾಡಿರುತ್ತಾರೆ.

ಕೇಂದ್ರ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, ಇವರು ಪರಿಸರ (ಸಂರಕ್ಷಣೆ) ಕಾಯ್ದೆ 1986 ಅಡಿಯಲ್ಲಿ ದಿನಾಂಕ 14.09.2006 ರಲ್ಲಿ ಜಾರಿಗೊಳಿಸಿರುವ ಪರಿಸರ ಅಘಾತ ಅಧ್ಯಯನದ ಅಧಿಸೂಚನೆ (ತಿದ್ದುಪಡಿ ದಿನಾಂಕ 01.12.2009) ರನ್ವಯ ಯೋಜನಾ ಪ್ರವರ್ತಕರು ಸದರಿ ಯೋಜನೆಗೆ ಪರಿಸರ ವಿಮೋಚನಾ ಪತ್ರ ಪಡೆಯಬೇಕಾಗಿರುತ್ತದೆ.

ಸದರಿ ಉದ್ದೇಶಿತ ಯೋಜನೆಯು ಮೇಲೆ ತಿಳಿಸಿದ ಅಧಿಸೂಚನೆ ಅಡಿಯಲ್ಲಿ ಒಳಪಡುವುದರಿಂದ ಪರಿಸರ ವಿಮೋಚನಾ ಪತ್ರ ಪಡೆಯಬೇಕಾಗಿರುತ್ತದೆ.ಆ ಮೇರೆಗೆ ಯೋಜನಾ ಪ್ರವರ್ತಕರು ಪರಿಸರ ವಿಮೋಚನಾ ಪತ್ರವನ್ನು ಪಡೆಯಲು ರಾಜ್ಯ ಮಟ್ಟದ ಪರಿಸರ ಆಘಾತ ಅಧ್ಯಯನ ಪ್ರಾಧಿಕಾರ ಕರ್ನಾಟಕ

ಇವರ ಸದರಿ ಯೋಜನೆಯ ಟರ್ಮ್ಸ್ ಆಫ್ ರೆಫೆರೆನ್ಸ್ (TOR) ಸಂಖ್ಯೆ SEIAA-796 MIN 2019 ದಿನಾಂಕ : 14-05-2020 ರ ಷರತ್ತುಬದ್ಧ ನಿಬಂಧನೆಗಳ ಅನ್ವಯ ಪರಿಸರ ಸಾರ್ವಜನಿಕ ಆಲಿಕೆ ಸಭೆ ನಡೆಸುವುದು ಕಡ್ಡಾಯವಾಗಿರುತ್ತದೆ.

ಯೋಜನಾ ಪ್ರವರ್ತಕರು ಷರತ್ತುಬದ್ಧ ನಿಬಂಧನೆಗಳನ್ನು ಪಾಲಿಸುವ ಸಲುವಾಗಿ ಮೆ. ಹೊರಿಜನ್ ವೆಂಚರ್ಸ್ ಬೆಂಗಳೂರು ಇವರು ತಯಾರಿಸಿದ ಕ್ಷಿಪ್ರ ಪರಿಸರ ಆಘಾತ ಅಂದಾಜು ಅಧ್ಯಯನ ವರದಿ ಮತ್ತು ಕಾರ್ಯಕಾರಿ ಸಾರಾಂಶವನ್ನು ಕನ್ನಡ ಮತ್ತು ಆಂಗ್ಲ ಭಾಷೆಗಳಲ್ಲಿ ಸಿದ್ಧಪಡಿಸಿ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸಿಕೊಡಲು ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಂಗಳೂರು ಇವರಿಗೆ ದಿನಾಂಕ 18-02-2021 ರಂದು ಮನವಿ ಸಲ್ಲಿಸಿರುತ್ತಾರೆ.

ಯೋಜನಾ ಪ್ರವರ್ತಕರ ಸದರಿ ಮನವಿಯ ಮೇರೆಗೆ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವತಿಯಿಂದ ಜಿಲ್ಲಾಧಿಕಾರಿಗಳು, ಬಳ್ಳಾರಿ ಇವರಿಗೆ ಪರಿಸರ ಸಾರ್ವಜನಿಕ ಆಲಿಕಾ ಸಭೆ ನಡೆಸಲು ಸೂಕ್ತ ದಿನಾಂಕ ಹಾಗೂ ಸಮಯವನ್ನು ನೀಡಲು ದಿನಾಂಕ 08-03-2021 ರಂದು ಪತ್ರದ ಮೂಲಕ ಕೋರಲಾಗಿರುತ್ತದೆ.

ಜಿಲ್ಲಾಧಿಕಾರಿಗಳು, ಬಳ್ಳಾರಿ ಜಿಲ್ಲೆ, ಬಳ್ಳಾರಿ ರವರ ಆದೇಶದನ್ವಯ ದಿನಾಂಕ: 15-06-2021 ರಂದು ಅಪರಾಹ್ನ 03.00 ಗಂಟೆಗೆ ಯೋಜನಾ ಸ್ಥಳದಲ್ಲಿ ಪರಿಸರ ಸಾರ್ವಜನಿಕ ಆಲಿಕೆ ಸಭೆ ನಡೆಸಲು ಸಮ್ಮತಿ ಸೂಚಿಸಿರುತ್ತಾರೆ. ಕೋವೀಡ್-19 ಹರಡುವಿಕೆಯಿಂದ ಆಲಿಕೆ ಸಭೆಯನ್ನು ಮುಂದುಡಲಾಗಿತ್ತು.

ಮುಂದುವರೆದು, ಜಿಲ್ಲಾಧಿಕಾರಿಗಳು, ಬಳ್ಳಾರಿ ಜಿಲ್ಲೆ, ಬಳ್ಳಾರಿ ರವರ ಆದೇಶದನ್ವಯ ದಿನಾಂಕ: 14-09-2021 ರಂದು **ಬೆಳಗ್ಗೆ 11.00** ಗಂಟೆಗೆ ಯೋಜನಾ ಸ್ಥಳದಲ್ಲಿ ಪರಿಸರ ಸಾರ್ವಜನಿಕ ಆಲಿಕೆ ಸಭೆ ನಡೆಸಲು ಸಮ್ಮತಿ ಸೂಚಿಸಿರುತ್ತಾರೆ. ಈ ಸಭೆಗೆ ಪೂರಕವಾಗಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ರಾಜ್ಯ ಮಟ್ಟದ ಪ್ರಮುಖ ದಿನ ಪತ್ರಿಕೆಗಳಾದ ಪ್ರಜಾವಾಣಿ (ಕನ್ನಡ) ಹಾಗೂ ದಿ ಹಿಂದು (ಆಂಗ್ಲ) ಗಳಲ್ಲಿ ದಿನಾಂಕ 14-08-2021 ರಂದು ಪತ್ರಿಕಾ ಪ್ರಕಟಣೆ ಬಳ್ಳಾರಿ ಜಿಲ್ಲೆಯ ಸ್ಥಳೀಯ ದಿನಪತ್ರಿಕೆಯಾದ "ಈ ನಮ್ಮ ಕನ್ನಡ ನಾಡು" ಪತ್ರಿಕೆಯಲ್ಲಿ ಸಹ ದಿನಾಂಕ: 16-08-2021 ರಂದು ಪರಿಸರ ಸಾರ್ವಜನಿಕ ಆಲಿಕೆ ಸಭೆ ಕುರಿತಾದ ಪ್ರಕಟಣೆಯನ್ನು ನೀಡಲಾಗಿರುತ್ತದೆ. (ಪ್ರತಿಯನ್ನು **ಅನುಬಂಧ-3** ರಲ್ಲಿ ಲಗತ್ತಿಸಲಾಗಿದೆ) ಈ ಯೋಜನೆಗೆ ಸಂಬಂಧಿಸಿದಂತೆ ಸಾರ್ವಜನಿಕರ ಅನಿಸಿಕೆ/ಆಕ್ಷೇಪಣೆ/ಸೂಚನೆ/ ಸಲಹೆ/ಅಭಿಪ್ರಾಯಗಳನ್ನು ಲಿಖಿತವಾಗಿ 30 ದಿನಗಳ ಒಳಗೆ ಸಲ್ಲಿಸಲು ಕೋರಲಾಗಿತ್ತು.

ಸದರಿ ಯೋಜನೆಗೆ ಸಂಬಂಧಿಸಿದಂತೆ ಯೋಜನಾ ಪ್ರವರ್ತಕರು ಸಲ್ಲಿಸಿದ್ದ ಕ್ಷಿಪ್ರ ಪರಿಸರ ಆಘಾತ ಅಂದಾಜು ಅಧ್ಯಯನದ ವರದಿ ಮತ್ತು ಕಾರ್ಯಕಾರಿ ಸಾರಂಶದ ಕನ್ನಡ ಮತ್ತು ಆಂಗ್ಲ ಭಾಷೆಯ ಪ್ರತಿಗಳನ್ನು ಈ ಕೆಳಕಂಡ ಸ್ಥಳಗಳಲ್ಲಿ ಸಾರ್ವಜನಿಕರ ಪರಾಮರ್ಶೆಗೆ ಇಡಲಾಗಿತ್ತು.

- ಮಾನ್ಯ ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬಳ್ಳಾರಿ,
- ಜಿಲ್ಲಾ ಪಂಚಾಯತ್, ಕಾರ್ಯಾಲಯ ಬಳ್ಳಾರಿ.
- ಜಿಲ್ಲಾ ಕೈಗಾರಿಕಾ ಕೇಂದ್ರ, ಬಳ್ಳಾರಿ.
- ತಾಲ್ಲೂಕು ಕಛೇರಿ, ಬಳ್ಳಾರಿ ತಾಲ್ಲೂಕು, ಬಳ್ಳಾರಿ ಜಿಲ್ಲೆ.

- ತಾಲ್ಲೂಕು ಪಂಚಾಯತಿ ಕಾರ್ಯಾಲಯ, ಬಳ್ಳಾರಿ ತಾಲ್ಲೂಕು, ಬಳ್ಳಾರಿ ಜಿಲ್ಲೆ.
- ಗ್ರಾಮ ಪಂಚಾಯತಿ ಕಾರ್ಯಾಲಯ, ವಣೇನೂರು, ಯರಗೋಡಿ , ಸಿಂಧವಾಳ
- ವಿಭಾಗಿಯ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬಳ್ಳಾರಿ.
- ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬಳ್ಳಾರಿ.
- ರಾಜ್ಯ ಮಟ್ಟದ ಪರಿಸರ ಅಘಾತ ಅಧ್ಯಯನ ಪ್ರಾಧಿಕಾರ, ಅರಣ್ಯ, ಜೀವಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು
- ಸಹಾಯ ಕೇಂದ್ರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ನೆಲ ಅಂತಸ್ತು, ನಂ. 49, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು-560001

ಸದರಿ ಪರಿಸರ ಸಾರ್ವಜನಿಕ ಸಭೆಯ ಕುರಿತು ಮೇಲೆ ತಿಳಿಸಿದ ಎಲ್ಲಾ ಇಲಾಖೆಯವರಿಗೆ ಪರಿಸರ ಸಾರ್ವಜನಿಕ ಸಭೆಯ ದಿನಾಂಕ: 14-09-2021 ರಂದು ನಡೆಯುತ್ತಿರುವ ಕುರಿತು ಹಾಗೂ ಪತ್ರಿಕಾ ಪ್ರಕಟಣೆ ಬಗ್ಗೆ ಮಾಹಿತಿಯನ್ನು ದಿನಾಂಕ:16-08-2021 ರಂದು ಪತ್ರದ ಮೂಲಕ ತಿಳಿಸಲಾಗಿರುತ್ತದೆ.

ಯೋಜನಾ ಪ್ರದೇಶದ ಸುತ್ತಮುತ್ತಲಿನ ಸಾರ್ವಜನಿಕರಿಗೆ ಉದ್ದೇಶಿತ ವಿಸ್ತರಣಾ ಘಟಕದ ಕುರಿತು ಹಾಗು ಸಾರ್ವಜನಿಕ ಆಲಿಕಾ ಸಭೆ ನಡೆಯುವ ಬಗ್ಗೆ ಅರಿವು ಮೂಡಿಸುವ ಸಲುವಾಗಿ ಉದ್ದಿಮೆಯ ಸುತ್ತಮುತ್ತಲಿನ ಗ್ರಾಮಗಳಾದ ಬೆಣಕಲ್. ಸಿಂಧವಾಳ, ವಣೇನೂರು, ಬಾಣಾಪುರ, ಕಲ್ಲು ಕಟಗೆನ, ಕೆ.ಕೆ.ಹಾಳು ಗ್ರಾಮಗಳಲ್ಲಿ ಕರ ಪತ್ರಗಳನ್ನು ಹಂಚಲಾಗಿದ್ದು ಮತ್ತು ಧ್ವನಿ ವರ್ದಕಗಳ ಮೂಲಕವು ಸಹ ಪ್ರಚಾರವನ್ನು ದಿನಾಂಕ 09-09-2021 ಮತ್ತು 13-09-2021 ರಂದು ಮಾಡಲಾಗಿರುತ್ತದೆ. (ಛಾಯಾ ಚಿತ್ರಗಳನ್ನು **ಅನುಬಂಧ-4**ರಲ್ಲಿ ಲಗತ್ತಿಸಿದೆ)

ಮಾನ್ಯ ಜಿಲ್ಲಾಧಿಕಾರಿಗಳು, ಬಳ್ಳಾರಿ ರವರ ಅಧಿಕೃತ ಜ್ಞಾಪನಾ ಪತ್ರದ ದಿನಾಂಕ : 13-09-2021 ರ ಅನ್ವಯ ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ಬಳ್ಳಾರಿ ರವರಿಗೆ ಅಧಿಕಾರ ನೀಡಿ ದಿನಾಂಕ : 14-09-2021 ರಂದು ನಡೆಯುವ ಪರಿಸರ ಆಲಿಕೆ ಸಭೆಯನ್ನು ನಡೆಸಲು ಆದೇಶಿಸಿರುತ್ತಾರೆ. ಸದರಿ ಜ್ಞಾಪನಾ ಪತ್ರದ ಪ್ರತಿಯನ್ನು **ಅನುಬಂಧ-5** ರಂತೆ ಲಗತ್ತಿಸಿದೆ.

ಮೇಲೆ ತಿಳಿಸಿದ ಅಧಿಸೂಚನೆಯಲ್ಲಿನ ಎಲ್ಲಾ ವಿಧಿ-ವಿಧಾನಗಳನ್ನು ಕ್ರಮಬದ್ಧವಾಗಿ ನಿಯಮಾನುಸಾರ ಪಾಲಿಸಿ ದಿನಾಂಕ 14-09-2021 ರಂದು **ಬೆಳಗ್ಗೆ 11.00** ಗಂಟೆಗೆ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಮಾನ್ಯ ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ಬಳ್ಳಾರಿ ಇವರ ಅಧ್ಯಕ್ಷತೆಯಲ್ಲಿ ಉದ್ದೇಶಿತ ಯೋಜನಾ ಸ್ಥಳದಲ್ಲಿ ಪ್ರಾರಂಭಿಸಲಾಯಿತು.

**ಸಭೆಯ ನಡವಳಿಗಳು**

ಸದಸ್ಯ ಸಮಾವೇಷಕರು ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ, ಬಳ್ಳಾರಿ ಪ್ರಾದೇಶಿಕ ಕಛೇರಿಯ ಪರಿಸರ ಅಧಿಕಾರಿಗಳಾದ ಶ್ರೀ ಉಮಾಶಂಕರ್ ಪಿ. ಕೆ. ಅವರು ಶ್ರೀ ಪಿ.ಎಸ್.ಮಂಜುನಾಥ, ಕ.ಆ.ಸೇ(ಹಿರಿಯ ಶ್ರೇಣಿ), ಅಪರಜಿಲ್ಲಾಧಿಕಾರಿಗಳು ಹಾಗೂ ಅಪರಜಿಲ್ಲಾ ದಂಡಾಧಿಕಾರಿಗಳುಮತ್ತು ಹಿರಿಯ ಪರಿಸರ ಅಧಿಕಾರಿ ಶ್ರೀ ಕೆ.ರಾಜು ಅವರಿಗೆ ಸ್ವಾಗತ ಕೋರಿದರು. ಮೆ:ಶ್ರೀ ಅಶೋಕ ಆರ್.ಕೆ. ಕಂಪನಿಯ ಪ್ರತಿನಿಧಿಗಳಿಗೆ, ಅಧಿಕಾರಿಗಳಿಗೆ, ಎಲ್ಲಾ ಸಾರ್ವಜನಿಕರಿಗೆ, ಪತ್ರಕರ್ತರಿಗೆ

ಹಾಗೂ ಇತರೆ ಇಲಾಖೆಯ ಅಧಿಕಾರಿಗಳಿಗೆ ಸ್ವಾಗತ ಕೋರಿದರು ಹಾಗೂ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, ಕೇಂದ್ರ ಸರ್ಕಾರ, ಇವರು ಪರಿಸರ(ಸಂರಕ್ಷಣೆ)ಕಾಯ್ದೆ, 1986 ರಡಿಯಲ್ಲಿ ದಿನಾಂಕ : 14-09-2006 ರಲ್ಲಿ ಜಾರಿಗೊಳಿಸಿರುವ ಪರಿಸರ ಅಘಾತ ಅಧ್ಯಯನದ ಅಧಿಸೂಚನೆ ಬಗ್ಗೆ ಸಂಕ್ಷಿಪ್ತವಾಗಿ ವಿವರಣೆ ನೀಡಿದರು. ಸದರಿ ಯೋಜನೆಗೆ ಸಂಬಂಧಪಟ್ಟ ಪ್ರಾಧೀಕಾರದಿಂದ ಪರಿಸರ ವಿಮೋಚನಾ ಪತ್ರ ಪಡೆಯಬೇಕಾಗಿರುವ ವಿಷಯವನ್ನು ಸಹ ಸಭೆಗೆ ತಿಳಿಸಿದರು. ಸಾರ್ವಜನಿಕ ಪರಿಸರ ಆಲಿಕೆ ಸಭೆಯ ಪೂರ್ವದಲ್ಲಿ ನಿಯಮಾನುಸಾರ ಕೈಗೊಂಡ ಕ್ರಮಗಳ ಬಗ್ಗೆ ವಿವರಣೆಯನ್ನು ನೀಡಿದರು ಹಾಗೂ ಸಾರ್ವಜನಿಕ ಆಲಿಕೆಯ ಸಭೆಯ ಅಧ್ಯಕ್ಷತೆಯನ್ನು ವಹಿಸುವಂತೆ ಮತ್ತು ಸಭೆಯನ್ನು ನಡೆಸಿಕೊಡುವಂತೆ ಮಾನ್ಯ ಅಪರ ಜಿಲ್ಲಾಧಿಕಾರಿಗಳನ್ನು ಕೋರಿದರು.

ಶ್ರೀ ಪಿ.ಎಸ್.ಮಂಜುನಾಥ, ಕ.ಆ.ಸೇ(ಹಿರಿಯ ಶ್ರೇಣಿ), ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ಬಳ್ಳಾರಿ ರವರು ಸಭೆಯನ್ನು ಉದ್ದೇಶಿಸಿ ಯೋಜನೆಗೆ ಪರಿಸರ ಸಾರ್ವಜನಿಕ ವಿಚಾರಣೆಯನ್ನು ನಡೆಸುವುದು ಕಡ್ಡಾಯವಾಗಿದೆ ಎಂದು ತಿಳಿಸಿದರು. ಪರಿಸರ ಅಘಾತ ಅಧ್ಯಯನ ಅಧಿಸೂಚನೆ ದಿನಾಂಕ: 14-09-2006 ರ ಬಗ್ಗೆ ವಿವರವಾದ ಮಾಹಿತಿಯನ್ನು ಸಭೆಯಲ್ಲಿದ್ದ ಸಾರ್ವಜನಿಕರಿಗೆ ತಿಳಿಸಿದರು ಹಾಗೂ ಪರಿಸರ ಸಾರ್ವಜನಿಕ ವಿಚಾರಣೆಯ ಅಗತ್ಯತೆಯನ್ನು ಸಂಕ್ಷಿಪ್ತವಾಗಿ ವಿವರಿಸಿದರು.

ಪ್ರಸ್ತಾವಿತ ಯೋಜನೆಯ ಪವರ್ ಪಾಯಿಂಟ್ ಪ್ರಸ್ತುತಿಯನ್ನು ನೀಡುವಂತೆ ಅವರು ಯೋಜನಾ ಪ್ರತಿಪಾದಕರಿಗೆ ಮಾಹಿತಿ ನೀಡಿದರು, ಅಲ್ಲಿ ವಿಚಾರಣೆಗೆ ಹಾಜರಿದ್ದ ಸಾರ್ವಜನಿಕರು ಪರಿಸರ ಸಮಸ್ಯೆಗಳ ಕುರಿತು ಉದ್ದೇಶಿತ ಯೋಜನೆಗೆ ತಮ್ಮ ಎಲ್ಲಾ ಅಭಿಪ್ರಾಯ/ಸಲಹೆ/ಪತ್ರಗಳನ್ನು ಯೋಜನೆಯ ಬಗ್ಗೆ ಲಿಖಿತ ಅಥವಾ ಮೌಖಿಕವಾಗಿ ಪ್ರಸ್ತುತಪಡಿಸುವಂತೆ ವಿನಂತಿಸಿಕೊಂಡರು. ಈ ನಡವಳಿಯು ಲಿಖಿತ ದಾಖಲೆ ಮತ್ತು ವಿಡಿಯೋಗ್ರಾಫಿ ಎರಡನ್ನು ಒಳಗೊಂಡಿದೆ ಎಂದು ಸಭೆಗೆ ತಿಳಿಸಿದರು.

ಅದರಂತೆ, ಮೆ: ಶ್ರೀ ಅಶೋಕ ಆರ್.ಕೆ, ಕಂಪನಿ ಪರವಾಗಿ ಶ್ರೀ ಸಚಿನ್ ಮೆ. ಹೊರಿಜನ್ ವೆಂಚರ್ಸ್ ಬೆಂಗಳೂರು ರವರು ತಯಾರಿಸಿರುವ ಕ್ರಿಯಾತ್ಮಕ ಸಾರಾಂಶದಲ್ಲಿ ತಿಳಿಸಿರುವ ಕ್ರಮಗಳು, ಶಬ್ಧದ ಮಟ್ಟದ ಸುಧಾರಿತ ಕ್ರಮಗಳು, ನೀರಿನ ಗುಣಮಟ್ಟ ಸುಧಾರಿತ ಕ್ರಮಗಳು, ಗಾಳಿಯ ಗುಣಮಟ್ಟ ಸುಧಾರಿತ ಕ್ರಮಗಳು, ಮಣ್ಣಿನ ಗುಣಮಟ್ಟದ ಸುಧಾರಿತ ಕ್ರಮಗಳು, ಜಮೀನಿನ ಬಳಕೆ, ಸಸ್ಶೀಕರಣ ಪೋಟೊಗಳು, ಗಣಿ ಗುತ್ತಿಗೆ ಪ್ರದೇಶದೊಳಗಿನ ರಕ್ಷಣಾತ್ಮಕ ಕ್ರಮಗಳ ಪೋಟೋ, ಪರಿಸರ ರಕ್ಷಣೆಯ ಬಜೆಟ್ ಚಟುವಟಿಕೆಗಳನ್ನೊಳಗೊಂಡ ವಿವರಗಳನ್ನು ಪವರ್ ಪಾಯಿಂಟ್ ಮೂಲಕ ಸಭೆಗೆ ಮಂಡಿಸಿದರು ಮತ್ತು ಉದ್ದಿಮೆಯ ಸಿ.ಎಸ್.ಆರ್. ಅಡಿಯಲ್ಲಿ ತೆಗೆದುಕೊಂಡಿರುವ ವಿವಿಧ ಚಟುವಟಿಕೆಗಳನ್ನೊಳಗೊಂಡ ವಿವರಗಳನ್ನು ಪವರ್ ಪಾಯಿಂಟ್ ಮೂಲಕ ಸಭೆಗೆ ಮಂಡಿಸಿದರು.

ಸಭೆಯ ಅಧ್ಯಕ್ಷರು ಈ ಉದ್ದೇಶಿತ ಯೋಜನೆಯ ಬಗ್ಗೆ ಪರಿಸರ ಕುರಿತಾಗಿ ಯಾವುದೇಸಲಹೆ/ಅನಿಸಿಕೆ/ಅಭಿಪ್ರಾಯ/ಸೂಚನೆಗಳು ಯಾವುದಾದರೂ ಇದ್ದಲ್ಲಿ ಸಭೆಗೆ ಮಂಡಿಸುವಂತೆ ಸಭೆಯಲ್ಲಿ ನೆರೆದಿದ್ದ ಸಾರ್ವಜನಿಕರನ್ನು ಕೋರಿದರು.

ಆಮೇರೆಗೆ ಸಾರ್ವಜನಿಕರು ಯೋಜನೆಯ ಬಗ್ಗೆ ತಮ್ಮ ಸಲಹೆ/ಅನಿಸಿಕೆ/ಅಭಿಪ್ರಾಯ/ಸೂಚನೆಗಳನ್ನು ಈ ಕೆಳಕಂಡಂತೆ ಮಂಡಿಸಿದರು.

1. **ಶ್ರೀ ಹನುಮಂತ ವಣೆನೂರು ಗ್ರಾಮ ರವರು ಮಾತನಾಡುತ್ತಾ,** ಸರ್ವೆ ನಂ. 180 ರಲ್ಲಿ ಇರುವ 56% ಜನರು ಹಗರಿನಲ್ಲಿರುವ ನೀರಿನಿಂದ ಬದುಕುತ್ತಿರುವುದಾಗಿ ತಿಳಿಸಿದರು. ಲಿಫ್ಟ್ ಎರಿಗೇಷನ್ ನಿಂದ ಸಾವಿರಾರು ಎಕರೆ ಭೂಮಿಯಲ್ಲಿ ವ್ಯವಸಾಯ ಮಾಡುತ್ತಿರುವುದಾಗಿ ತಿಳಿಸಿದರು. ಸದರಿ ಪ್ರದೇಶದಲ್ಲಿ ಮರಳು ಲಭ್ಯವಿರುವುದಿಲ್ಲವೆಂದು 10 ಅಡಿಗಳಷ್ಟು ಭೂಮಿ ಅಗೆದರೆ ಮರಳು ದೊರಕುವುದಾಗಿ ತಿಳಿಸಿದರು. ಹೆಚ್ಚಿನ ಜನರ ಕಸುಬು ಕುರಿ, ಹಸು ಸಾಗಾಣಿಕೆಯಾಗಿದ್ದು ಹಗರಿ ನದಿ ತೀರದಲ್ಲಿ ಕುರಿಗಳನ್ನು ಮೇಯಿಸಿಕೊಂಡು ಬದುಕುತ್ತಿರುವುದಾಗಿ ತಿಳಿಸಿದರು. ಮರಳು ಗಣಿಗಾರಿಕೆಯಿಂದ ಅಂತರ್ಜಲ ಸಹ ಕಡಿಮೆಯಾಗುವುದಾಗಿ ತಿಳಿಸಿದರು. ಹಗರಿ ಹಾಗೂ ತಾಳೂರು ಗ್ರಾಮದ ಕಲುಷಿತ ನೀರು ಶುದ್ಧಗೊಳಿಸಲು ಮರಳು ಅವಶ್ಯಕತೆ ಇದೆ ಎಂದು ತಿಳಿಸಿದರು. ಮರಳು ಗಣಿಗಾರಿಕೆ ಮಾಡಿದರೆ ನೀರು ಕಲುಷಿತಗೊಂಡು ಬೆಳೆಗಳಿಗೆ ತೊಂದರೆ ಉಂಟಾಗುವುದಾಗಿ ತಿಳಿಸಿದರು. ಹಸುಗಳಿಗೆ ಕುಡಿಯುವ ನೀರಿನ ತೊಂದರೆ ಉಂಟಾಗುವುದಾಗಿ ತಿಳಿಸಿದರು. ಬೇಸಿಗೆ ಸಮಯದಲ್ಲಿ ನೀರು ಉಪ್ಪಾಗಿ ಪರಿವರ್ತನೆಯಾಗುತ್ತದೆ ಎಂದು ತಿಳಿಸಿದರು. ಸದರಿ ಸ್ಥಳದಲ್ಲಿ ಮರಳು ಗಣಿಗಾರಿಕೆ ಮಾಡಬಾರದೆಂದು ತಮ್ಮ ಅನಿಸಿಕೆ ವ್ಯಕ್ತಪಡಿಸಿದರು.

2. **ಶ್ರೀ ಡಿ.ಎನ್. ಬೀಮಲಿಂಗಯ್ಯ ಬೆಣಕಲ್ಲು ಗ್ರಾಮ** ರವರು ಮಾತನಾಡುತ್ತಾ, ಸರ್ವೇ ನಂ. 265, 167 ಹಗರಿ ಗ್ರಾಮಕ್ಕೆ ಸೇರಿದ ಜಮೀನು ಸದರಿ ಸ್ಥಳದಲ್ಲಿ ಮರಳು ಗಣಿಗಾರಿಕೆ ಮಾಡಿದರೆ ನೀರಿನ ಅಂಶ ಕಡಿಮೆಯಾಗುವುದಾಗಿ ತಿಳಿಸಿದರು. ಹಗರಿ ನದಿಯಲ್ಲಿ ಬರುವ ನೀರಿಗೆ ಹಾಗೂ ಜನರಿಗೆ ತೊಂದರೆ ಉಂಟಾಗುತ್ತದೆ ಎಂದು ತಿಳಿಸಿದರು.

3. **ಶ್ರೀ ಜಿ. ಗಂಗಾಧರ ವಣೆನೂರು ಗ್ರಾಮ** ರವರು ಮಾತನಾಡುತ್ತಾ, ಹೊಣೆನೂರು ಗ್ರಾಮ 6000 ಜನ ಸಂಖ್ಯೆ ಹೊಂದಿದ್ದು, ಗ್ರಾಮದ ವಿಸ್ತೀರ್ಣ 1400 ಎಕರೆ ಇರುವುದಾಗಿ ತಿಳಿಸಿದರು. 1400 ಎಕರೆ ಪ್ರದೇಶದಲ್ಲಿ ಸರ್ವೇ ನಂ. 190 ರಲ್ಲಿ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಟ ಪಂಗಡ ಜನಾಂಗದ ಜಮೀನುಗಳಿದ್ದು ಸದರಿ ಸ್ಥಳದಲ್ಲಿ ಸಜ್ಜೆ, ಜೋಳ, ಭತ್ತ ಬೆಳೆಸಿಕೊಂಡು ಜೀವನ ಸಾಗಿಸುತ್ತಿರುವುದಾಗಿ ತಿಳಿಸಿದರು. ಮರಳು ಗಣಿಗಾರಿಕೆಯು ಸರ್ವೇ ನಂ. 190 ಮಾಡಿದರೆ ಎಲ್ಲರಿಗೂ ಬಹಳ ತೊಂದರೆ ಉಂಟಾಗುವುದಾಗಿ ತಿಳಿಸಿದರು. ಸರ್ವೇ ನಂ. 190 ರಲ್ಲಿ ಮರಳು ಗಣಿಗಾರಿಕೆ ಮಾಡಬಾರದೆಂದು ಬೇರೆ ಸ್ಥಳದಲ್ಲಿ ಅನುಕೂಲವಿರುವ ಕಡೆ ಮಾಡಬೇಕೆಂದು ತಿಳಿಸಿದರು.

4. **ಶ್ರೀ ವೀರೇಶ ವಣೆನೂರು ಗ್ರಾಮ** ರವರು ಮಾತನಾಡುತ್ತಾ, ಪೂರ್ವ ಕಾಲದಿಂದಲೂ ತಾವಿರುವುದಾಗಿ ಅದು ಬಿಟ್ಟರೆ ತಮಗೆ ಜೀವನವಿಲ್ಲವೆಂದು ತಿಳಿಸಿ, ಮರಳು ಗಣಿಗಾರಿಕೆ ಮಾಡಬಾರದೆಂದು ತಿಳಿಸಿದರು.

5. **ಶ್ರೀಮತಿ ಶಾಂತಮ್ಮ ವಣೆನೂರು ಗ್ರಾಮ** ರವರು ಮಾತನಾಡುತ್ತಾ, ತಾವು ಅದೇ ಭೂಮಿಯಿಂದ ಬದುಕುತ್ತಿರುವುದಾಗಿ ಕೆಲವರಿಗೆ 10 ಎಕರೆ ಕೆಲವರಿಗೆ 1 ಎಕರೆ ಭೂಮಿ ಇದ್ದು, ಕೃಷಿ ಭೂಮಿಯಿಂದಲೆ ಜೀವನ ಮಾಡುತ್ತಿರುವುದಾಗಿ ತಿಳಿಸಿದರು. ತಮ್ಮ ಭವಿಷ್ಯವೆ ಕೃಷಿ

ಭೂಮಿಯಿಂದ ಎಂದು ತಿಳಿಸಿದರು. ತಾವೆಲ್ಲ ಪರಿಶಿಷ್ಟ ಜನಾಂಗಕ್ಕೆ ಸೇರಿರುವುದಾಗಿ ತಿಳಿಸಿದರು. ತಮ್ಮ ಬದುಕನ್ನು ಕಸಿದುಕೊಳ್ಳಬಾರದೆಂದು ತಿಳಿಸಿದರು.

6. **ಶ್ರೀ ರಂಗಪ್ಪ ವಣೇನೂರು ಗ್ರಾಮ** ರವರು ಮಾತನಾಡುತ್ತಾ ಇವರ ಪೂರ್ವಜರಾದ ತಂದೆ ಮುತ್ತಾತನ ಕಾಲದಿಂದ ಹಗರಿಯಲ್ಲಿ ಕೃಷಿ ಮಾಡುತ್ತಿದ್ದು ತಮಗೆ ಬೇರೆ ಸ್ಥಳದಲ್ಲಿ ಜಮೀನು ಇಲ್ಲವೆಂದು ತಿಳಿಸಿದರು. ಕೃಷಿ ಭೂಮಿ ತಮಗೆ ಜೀವನಾಧಾರವಾಗಿರುವುದಾಗಿ ತಿಳಿಸಿದರು. ಮರಳು ಗಣಿಗಾರಿಕೆ ಮಾಡುವುದರಿಂದ ತಮಗೆ ಭಾರಿ ಅನಾಹುತ ಉಂಟಾಗುವುದಾಗಿ ಹಾಗೂ ಕುಟುಂಬಕ್ಕೆ ತೊಂದರೆ ಉಂಟಾಗುವುದಾಗಿ ತಿಳಿಸಿದರು. ಮರಳು ಗಣಿಗಾರಿಕೆ ತಡೆಯಬೇಕೆಂದು ಮನವಿ ಮಾಡಿಕೊಂಡರು.
7. **ಶ್ರೀ ಸಣ್ಣಪ್ಪ ವಣೇನೂರು ಗ್ರಾಮ** ರವರು ಮಾತನಾಡುತ್ತಾ ತಾವು ಪರಿಶಿಷ್ಟ ಜನಾಂಗಕ್ಕೆ ಸೇರಿದವರೆಂದು ತಿಳಿಸಿ ತಾವು ಕೃಷಿ ಭೂಮಿಯಿಂದಲೆ ಬದುಕಿರುವುದಾಗಿ ತಿಳಿಸಿದರು. ಕೃಷಿ ಭೂಮಿ ಬಿಟ್ಟರೆ ಬೇರೆ ಗತಿ ಇಲ್ಲವೆಂದು ತಿಳಿಸಿದರು. ದಯವಿಟ್ಟು ತಮ್ಮನ್ನು ಕಾಪಾಡಬೇಕೆಂದು ತಿಳಿಸಿದರು.
8. **ಶ್ರೀ ಮರಿಯಪ್ಪ ವಣೇನೂರು ಗ್ರಾಮ** ರವರು ಮಾತನಾಡುತ್ತಾ ಸರ್ವೇ ನಂ. 190 ರಲ್ಲಿ ಮರುಳು ಗಣಿಗಾರಿಕೆ ಮಾಡಿದರೆ ತಾವು ಬದುಕುವುದಿಲ್ಲವೆಂದು ತಿಳಿಸಿದರು. ಆದುದ್ದರಿಂದ ಸದರಿ ಸ್ಥಳದಲ್ಲಿ ಮರಳು ಗಣಿಗಾರಿಕೆ ಮಾಡಬಾರದೆಂದು ತಿಳಿಸಿದರು.
9. **ಶ್ರೀ ಭೀಮೇಶ ವಣೇನೂರು ಗ್ರಾಮ** ರವರು ಮಾತನಾಡುತ್ತಾ ವೊಣೇನೂರು ಗ್ರಾಮದ ಮತ್ತು ಸುತ್ತಮುತ್ತಲಿನ ಪ್ರಜೆಗಳಿಂದ ಮರಳು ಗಣಿಗಾರಿಕೆಗೆ ವಿರೋಧ ವ್ಯಕ್ತಪಡಿಸಿದರು. ಸುಮಾರು 80-90 ವರ್ಷಗಳಿಂದ ತಮ್ಮ ಕುಟುಂಬಗಳು ಈ ಕೃಷಿ ಭೂಮಿಯನ್ನು ನಂಬಿಕೊಂಡು ಜೀವನ ನಡೆಸುತ್ತಿರುವುದಾಗಿ ತಿಳಿಸಿದರು. ಇಲ್ಲಿರುವ ಭೂಮಿಗಳು ಅರ್ಧ ಎಕರೆ, ಒಂದು ಎಕರೆ ಪ್ರತಿಯೊಬ್ಬರಿಗೂ ಇರುವುದಾಗಿ ತಿಳಿಸಿದರು. ಈ ಕೃಷಿ ಭೂಮಿಯ ಮೇಲೆ ಬಹಳಷ್ಟು ಕುಟುಂಬಗಳು ಜೀವನ ಸಾಗಿಸುತ್ತಿರುವುದಾಗಿ ತಿಳಿಸಿದರು. ಮರಳು ಗಣಿಗಾರಿಕೆ ಮಾಡುವುದರಿಂದ ಹಲವಾರು ಜನರ ಜೀವನ ನಾಶವಾಗುತ್ತದೆ ಎಂದು ತಿಳಿಸಿದರು. ಬೇರೆ ಸ್ಥಳಗಳಲ್ಲಿ ತಮಗೆ ಜಮೀನು ಇಲ್ಲವೆಂದು ಈ ಜಮೀನನ್ನು ನಂಬಿ ಜೀವನ, ವಿದ್ಯಾಭ್ಯಾಸ ಸಾಗಿಸುತ್ತಿರುವುದಾಗಿ ತಿಳಿಸಿದರು. ಆದ್ದರಿಂದ ಮರಳು ಗಣಿಗಾರಿಕೆ ತಡೆ ಹಿಡಿಯಬೇಕೆಂದು ತಿಳಿಸಿದರು.

10. **ಶ್ರೀ ರಾಮಲಿಂಗ ವಣೇನೂರು ಗ್ರಾಮ** ರವರು ಮಾತನಾಡುತ್ತಾ ತಮ್ಮ ಗ್ರಾಮಕ್ಕೆ ರಸ್ತೆ ಮಾಡುವಂತೆ ತಿಳಿಸಿದರು. ಈ ಮೊದಲು ಮರಳು ಗಣಿಗಾರಿಕೆಯನ್ನು ಬೇರೆಯವರು ಮಾಡಿರುವುದಾಗಿ ತಿಳಿಸಿದರು. ಸದರಿ ಸ್ಥಳದಲ್ಲಿ ಬಡ ಜನರು ಇರುವುದಾಗಿ ತಿಳಿಸಿದರು.
11. **ಶ್ರೀ ಬಿ.ವಿ.ರೆಡ್ಡಿ, ಬಳ್ಳಾರಿ** ರವರು ಮಾತನಾಡುತ್ತಾ ಗ್ರಾಮಸ್ಥರು ಮಾತನಾಡಿರುವ ಬಗ್ಗೆ ತಿಳಿಸುತ್ತಾ, ಗ್ರಾಮಸ್ಥರಿಗೆ ಸಮಸ್ಯೆ ಇರುವುದಾಗಿ ತಿಳಿಸಿ ಯೋಜನಾದಾರರು ಗ್ರಾಮಸ್ಥರ ಸಮಸ್ಯೆಯನ್ನು ಪರಿಹರಿಸಬೇಕೆಂದು ತಿಳಿಸಿದರು. ಸಮನ್ವಯ ಸಮಿತಿಯನ್ನು ರಚಿಸಿ ಗ್ರಾಮಸ್ಥರ ಸಮಸ್ಯೆಯನ್ನು ಪರಿಹರಿಸಬೇಕೆಂದು ತಿಳಿಸಿದರು. ಮರಳು ಗಣಿಗಾರಿಕೆ ಮಾಡಬೇಕೆಂದು ತಿಳಿಸಿದರು.

ಗ್ರಾಮಸ್ಥರ ಸಮಸ್ಯೆಯನ್ನು ಯೋಜನದಾರರು ಪರಿಹರಿಸಬೇಕೆಂದು ತಿಳಿಸಿದರು. ಉದ್ದಿಮೆಗಳು ಸ್ಥಾಪನೆಯಾದರೆ ಅಭಿವೃದ್ದಿಯಾಗುತ್ತದೆ ಎಂದು ತಿಳಿಸಿದರು.

12. **ಶ್ರೀ ಆನಂದ ಬೆಣಕಲ್ಲು ಗ್ರಾಮ** ರವರು ಮಾತನಾಡುತ್ತಾ ಗ್ರಾಮಕ್ಕೆ ಮೂಲ ಆಧಾರ ಕೃಷಿ ಭೂಮಿ ಎಂದು ತಿಳಿಸಿದರು. ಗ್ರಾಮಕ್ಕೆ ಕಾಲುವೆ ನೀರು ವ್ಯವಸ್ಥೆ ಇದ್ದು ನೀರು ಬರಬೇಕಾದರೆ ನಾಲ್ಕು ಗ್ರಾಮಗಳಾದ ನಂತರ ಬರುತ್ತದೆ ಎಂದು ತಿಳಿಸಿದರು. ನೀರಿನ ಮೂಲ ಆಧಾರ ವೇದಾವತಿ ನದಿ ತೀರ ಎಂದು ತಿಳಿಸಿದರು. ಈ ಮೊದಲು 4 ಅಡಿಯಲ್ಲಿ ಕೊಳವೆ ಭಾವಿಗೆ ನೀರು ಬರುತ್ತಿತ್ತೆಂದು ಪ್ರಸ್ತುತ 8 ಅಡಿಗೆ ನೀರು ಬರುವುದಾಗಿ ತಿಳಿಸಿದರು. ಮರಳು ಗಣಿಗಾರಿಕೆ ಮಾಡಿದರೆ 20 ಅಡಿ ಅಗದರೆ ನೀರು ಬರಬಹುದೆಂದು ತಿಳಿಸಿದರು. 20-30 ಅಡಿ ಕೊಳವೆ ಭಾವಿ ನೀರು ವಿಷವಾಗಿ ಬರುವುದಾಗಿ ತಿಳಿಸಿದರು. ಸರ್ಕಾರದ ಮೂಲಕ ಕುಡಿಯುವ ನೀರು ಸರಬರಾಜು ಕಾಲುವೆ ನೀರು ಎಂದು ತೋರಿಸಿದಾರೆ. ವಾಸ್ತವವಾಗಿ ಹಗರಿ ನದಿಯ ನೀರು ಮತ್ತು ಕೊಳವೆ ಭಾವಿ ನೀರು ಗ್ರಾಮಕ್ಕೆ ಬಳಸುತ್ತಿರುವುದಾಗಿ ತಿಳಿಸಿದರು. ಕೃಷಿ ಕೆಲಸಕ್ಕಾಗಿ ಹಗರಿ ನದಿಯಿಂದ ಪಂಪ್ ಸೆಟ್ ಹಾಕಿಕೊಂಡಿರುವುದಾಗಿ ಕಾಲುವೆ ನೀರು ತಮ್ಮ ಕೃಷಿ ಜಮೀನಿಗೆ ಬರುವುದಿಲ್ಲವೆಂದು ತಿಳಿಸಿದರು. ಮರಳು ಗಣಿಗಾರಿಕೆಯಿಂದ 5 ಅಡಿ ತೆಗೆದರು ಕೊಳವೆ ಭಾವಿಗೆ ನೀರು ಬರುವುದಿಲ್ಲವೆಂದು ತಿಳಿಸಿದರು. ಕೃಷಿ ಭೂಮಿ ಹಾಳಾಗಿಬಿಡುತ್ತದೆ ಎಂದು ತಿಳಿಸಿದರು. ಪಕ್ಕದಲ್ಲಿ ಮೊಕಾ ಅರಣ್ಯ ಪ್ರದೇಶವಿದ್ದು ಹಗರಿ ನದಿಯ ಅಂತರ್ಜಲದಿಂದ ಕಾಡು ಬದುಕಿರುವುದಾಗಿ ತಿಳಿಸಿದರು. ಅಂತರ್ಜಲ 20 ಅಡಿಗೆ ಹೋದರೆ ಅರಣ್ಯವೆಲ್ಲಾ ನಾಶವಾಗುವುದಾಗಿ ತಿಳಿಸಿದರು. ಬಳ್ಳಾರಿಯಲ್ಲಿ ಅತ್ಯಧಿಕ ಮರಳು ದೊರೆಯುತ್ತಿದ್ದು, ನದಿ ಮರಳು ಬೇಕಾಗಿರುವುದಿಲ್ಲವೆಂದು ತಿಳಿಸಿದರು. ಕಡಿಮೆ ದರದಲ್ಲಿ ಬಳ್ಳಾರಿಯಲ್ಲಿ ಮರಳು ದೊರೆಯುವುದಾಗಿ ತಿಳಿಸಿದರು. ಕೈಗಾರಿಕೆ ಸ್ಥಾಪಿಸುವುದಾದರೆ ಬಯಲು ಭೂಮಿಯಲ್ಲಿ ಸ್ಥಾಪಿಸುವಂತೆ ತಿಳಿಸಿದರು. ಮರಳು ಗಣಿಗಾರಿಕೆ ಮಾಡಿದರೆ ನೀರು ಶೇಖರಣೆಯಾಗಿ ಜನರಿಗೆ ಓಡಾಟಕ್ಕೆ ತೊಂದರೆ ಉಂಟಾಗುವುದಾಗಿ ತಿಳಿಸಿದರು. ಈ ಮೊದಲು 365 ದಿನ ನದಿಯಲ್ಲಿ ನೀರು ಬರುತ್ತಿತ್ತೆಂದು ಪ್ರಸ್ತುತ ನೀರು ಕಡಿಮೆಯಾಗಿದ್ದು 6 ರಿಂದ 7 ತಿಂಗಳು ನೀರು ಹರಿಯುತ್ತಿರುವುದಾಗಿ ತಿಳಿಸಿದರು. ನೀರು ಹರಿಯುವುದರಿಂದ ಅದರಲ್ಲಿ ಕುಣಿಗಳಿದ್ದರೆ ಜನರ ಓಡಾಟಕ್ಕೆ ತೊಂದರೆ ಉಂಟಾಗುವುದಾಗಿ ಇಲ್ಲದಿದ್ದರೆ ಸೇತುವೆ ಮಾಡಿಕೊಡಬೇಕೆಂದು ತಿಳಿಸಿದರು. ಬೆಣಕಲು ಗ್ರಾಮದಲ್ಲಿ ಜನಸಂಖ್ಯೆ ಹೆಚ್ಚಿದ್ದು ಭೂಮಿ ಕಡಿಮೆ ಇರುವುದಾಗಿ ತಿಳಿಸಿದರು. ಆದ್ದುದರಿಂದ ಬೇರೆ ಬೇರೆ ಗ್ರಾಮಗಳ ಕೃಷಿ ಭೂಮಿ ಮಾಡಿ ಜೀವನ ಸಾಗಿಸುತ್ತಿರುವುದಾಗಿ ತಿಳಿಸಿದರು. ಮರಳು ಗಣಿಗಾರಿಕೆಯಿಂದ ನೀರಿನ ಸಮಸ್ಯೆ ಉಂಟಾಗಿ, ಮರಗಳು ಗಿಡ್ಡಗಳು ಸಸಿಸಿ ಹೋಗುವುದಾಗಿ ತಿಳಿಸಿದರು. ಈ ದರದಲ್ಲಿ ಮರಳು ಗಣಿಗಾರಿಕೆಯು ನ್ಯಾಯಯುತವಾಗಿ ಮಾಡಲು ಸಾಧ್ಯವಿಲ್ಲವೆಂದು ಅಕ್ರಮ ಗಣಿಗಾರಿಕೆ ಮಾಡಲು ಕಡಿಮೆ ದರವನ್ನು ಹಾಕಿರುವುದಾಗಿ ತಿಳಿಸಿದರು. ಅಕ್ರಮ ಗಣಿಗಾರಿಕೆಯಿಂದ ಸಂಪತ್ತು ಹಾಳಾಗುವುದೆಂದು ತಿಳಿಸಿದರು.

13. **ಶ್ರೀ ನಾಗನಗೌಡ ಬೆಣಕಲ್ಲು ಗ್ರಾಮ** ರವರು ಮಾತನಾಡುತ್ತಾ ಮರಳು ಗಣಿಗಾರಿಕೆ ಮಾಡಿದರೆ ಕೊಳವೆ ಭಾವಿಗಳು ನಾಶವಾಗುವುದಾಗಿ ತಿಳಿಸಿದರು. ಉದ್ಯೋಗ ಅರಸಿಕೊಂಡು ಕೆಲವು ಜನ

ಬೆಂಗಳೂರಿಗೆ ತೆರಳಿದ್ದು, ಮರಳು ಗಣಿಗಾರಿಕೆ ಪ್ರಾರಂಭವಾದರೆ ಎಲ್ಲ ಜನರು ಉದ್ಯೋಗಕ್ಕಾಗಿ ಬೇರೆ ಕಡೆ ಹೋಗಬೇಕಾಗುತ್ತದೆ ಎಂದು ತಿಳಿಸಿದರು. ಮರಳು ಗಣಿಗಾರಿಕೆ ಮಾಡಬಾರದೆಂದು ತಮ್ಮ ವಿರೋಧವಿದೆ ಎಂದು ತಿಳಿಸಿದರು.

14.**ಶ್ರೀ ಬಸಪ್ಪ ಆನಂದಪ್ಪ ವಣೆನೂರು ಗ್ರಾಮ** ರವರು ಮಾತನಾಡುತ್ತಾ, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷರು: ಮರಳು ಗಣಿಗಾರಿಕೆಯು ಪರಿಶಿಷ್ಟ ಜಾತಿಯ ಜನರ ಭೂಮಿಯನ್ನು ಬಿಟ್ಟು ಮಾಡುವುದಾದರೆ ತಮ್ಮ ಅಭ್ಯಂತರವಿಲ್ಲವೆಂದು ತಿಳಿಸಿದರು.

15.**ಶ್ರೀ ಲಕ್ಷ್ಮೀನಾರಾಯಣ ಬೆಣಕಲ್ಲು ಗ್ರಾಮ** ರವರು ಮಾತನಾಡುತ್ತಾ, ಮರಳು ಗಣಿಗಾರಿಕೆ ಈ ಸ್ಥಳದಲ್ಲಿ ಮಾಡಬಾರದೆಂದು ತಿಳಿಸಿದರು. ಕೃಷಿಕರು ಬಹಳ ಜನ ಇರುವುದಾಗಿ ಕೃಷಿಯನ್ನೇ ನಂಬಿಕೊಂಡಿರುವುದಾಗಿ ತಿಳಿಸಿದರು. ಪ್ರಾಣ ಕೊಟ್ಟರು ಸರಿ ಮರಳು ಮಾತ್ರ ಕೊಡುವುದಿಲ್ಲವೆಂದು ತಿಳಿಸಿದರು. ಇಷ್ಟು ದಿನ ಅಕ್ರಮ ಮರಳು ಗಣಿಗಾರಿಕೆ ಮಾಡಿರುವುದಾಗಿ ತಡೆಗಟ್ಟಲು ಹೋದರೆ ದೌರ್ಜನ್ಯ ಎಸಗಿರುವುದಾಗಿ ತಿಳಿಸಿದರು. ಮರಳು ಗಣಿಗಾರಿಕೆ ಮಾಡಲು ಬಿಡುವುದಿಲ್ಲವೆಂದು ತಿಳಿಸಿದರು.

16.**ಶ್ರೀ ಸುದರ್ಶನ ಸಾಮಜಿಕ ಕಾರ್ಯಕರ್ತ ಹೈದ್ರಾಬಾದ್** ರವರು ಮಾತನಾಡುತ್ತಾ, ಮರಳು ಗಣಿಗಾರಿಕೆಯಿಂದ ಮರಳು ಮತ್ತು ಮಣ್ಣು ಹಾಳಾಗುವುದಾಗಿ, ಮರಳು ಗಣಿಗಾರಿಕೆ ಹಲವಾರು ಮೀಟರ್ ಆಳವಾಗಿ ಮಾಡುವುದರ ಬಗ್ಗೆ ತಮ್ಮ ಸಲಹೆಯನ್ನು ಕೊಡುವುದಾಗಿ ತಿಳಿಸಿದರು.

17.**ಶ್ರೀಮತಿ ನಾಗಮ್ಮ ವಣೆನೂರು ಗ್ರಾಮ** ರವರು ಮಾತನಾಡುತ್ತಾ, ತಾವು ಬಡವರಾಗಿದ್ದು ಕೃಷಿ ಭೂಮಿಯಿಂದ ಬದುಕುತ್ತಿರುವುದಾಗಿ ತಿಳಿಸಿದರು. ತಮ್ಮಗಳಿಗೆ ಅರ್ಧ ಎಕರೆ ಕಾಲು ಎಕರೆ ಜಮೀನು ಮಾತ್ರ ಇರುವುದಾಗಿ ಅದರಲ್ಲಿ ತಮ್ಮ ಜೀವನ ನಡೆಸುತ್ತಿರುವುದಾಗಿ ತಿಳಿಸಿದರು. ಮರಳು ಗಣಿಗಾರಿಕೆ ಮಾಡಬಾರದೆಂದು ತಿಳಿಸಿದರು.

18.**ಶ್ರೀಮತಿ ಚಂದ್ರಮ್ಮ ವಣೆನೂರು ಗ್ರಾಮ** ರವರು ಮಾತನಾಡುತ್ತಾ, ಕೃಷಿ ಭೂಮಿಯ ಮೇಲೆ ತಮ್ಮ ಬದುಕು ಸಾಗಿಸುತ್ತಿರುವುದಾಗಿ ತಿಳಿಸಿದರು. ಮರಳು ಗಣಿಗಾರಿಕೆ ಮಾಡಬಾರದೆಂದು ತಿಳಿಸಿದರು.

19.**ಶ್ರೀ ನಂಜಪ್ಪ ಬೆಣಕಲ್ಲು ಗ್ರಾಮ** ರವರು ಮಾತನಾಡುತ್ತಾ, ಸರ್ವೇ ನಂ. 190 ರಲ್ಲಿ ಹಗರಿಯಲ್ಲಿ ಮರಳು ಗಣಿಗಾರಿಕೆ ಮಾಡಿದರೆ ಜನರೆಲ್ಲರು ವಿಷ ಕುಡಿದು ಸಾಯುವುದೊಂದೆ ಮಾರ್ಗವೆಂದು ತಿಳಿಸಿದರು. ಪ್ರತಿಯೊಬ್ಬರಿಗೆ ಇಲ್ಲಿ ಕೇವಲ ಅರ್ಧ ಎಕರೆ ೧ ಎಕರೆ ಮಾತ್ರ ಕೃಷಿ ಭೂಮಿ ಇದ್ದು ಸದರಿ ಪ್ರದೇಶದಲ್ಲಿ ಮರಳು ಗಣಿಗಾರಿಕೆ ಮಾಡಬಾರದೆಂದು ತಿಳಿಸಿದರು.

20.**ಶ್ರೀ ನಾಗನಗೌಡ ಬೆಣಕಲ್ಲು ಗ್ರಾಮ** ರವರು ಮಾತನಾಡುತ್ತಾ, ತಮ್ಮ ಗ್ರಾಮಕ್ಕೆ ಬ್ಯಾಂಕ್, ನಾಡ ಕಛೇರಿ, ಪಂಚಾಯಿತಿ ಇರುವುದಿಲ್ಲವೆಂದು ತಿಳಿಸಿದರು. ತಮ್ಮ ಗ್ರಾಮಕ್ಕೆ ಸರ್ಕಾರದ ಸೌಲಭ್ಯವೆಂದರೆ ಅಂಗನವಾಡಿ ಮತ್ತು ಪ್ರಾಥಮಿಕ ಶಾಲೆ ಎಂದು ತಿಳಿಸಿದರು. ಗ್ರಾಮಕ್ಕೆ ಅಭಿವೃದ್ಧಿ ಇಲ್ಲವೆಂದು ಮತ್ತು ಮರಳು ಗಣಿಗಾರಿಕೆ ಮಾಡಬಾರದೆಂದು ತಿಳಿಸಿದರು.

21. ಶ್ರೀ ಹೊನ್ನೂರಪ್ಪ, ಗ್ರಾಮ ಪಂಚಾಯಿತಿ ಸದಸ್ಯ ರವರು ಮಾತನಾಡುತ್ತಾ ಗ್ರಾಮಕ್ಕೆ ಕುಡಿಯು ನೀರಿನ ಜೆ.ಜೆ. ಸ್ಕೀಮ್ ಬಂದಿದ್ದು, ಒಂದು ಟ್ಯಾಂಕ್ ಮತ್ತು ಸಂಪ್ ಕಟ್ಟಲು ಎರಡು ತಿಂಗಳಿಂದ ಸಾಧ್ಯವಾಗುತ್ತಿಲ್ಲವೆಂದು ತಿಳಿಸಿದರು.

ಕೊನೆಯಲ್ಲಿ ಸಾರ್ವಜನಿಕ ಆಲಿಕೆ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಶ್ರೀ ಪಿ.ಎಸ್.ಮಂಜುನಾಥ, ಕ.ಆ.ಸೇ(ಹಿರಿಯ ಶ್ರೇಣಿ), ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ಬಳ್ಳಾರಿ ಇವರು ತಮ್ಮ ಅಧ್ಯಕ್ಷೀಯ ಮಾತುಗಳನ್ನಾಡುತ್ತ, ಸದರಿ ಸಭೆಯು ಪರಿಸರ ಸಾರ್ವಜನಿಕ ಸಭೆಯಾಗಿದ್ದು, ಇದರಲ್ಲಿ ಎಲ್ಲರಿಗೂ ಮಾತನಾಡಲು ಮುಕ್ತ ಅವಕಾಶವನ್ನು ಕಲ್ಪಿಸಲಾಗಿದೆ. ಹಾಗು ತಾವು ಮಾತನಾಡಿದ ಪರ/ವಿರೋಧ ಅಭಿಪ್ರಾಯಗಳನ್ನ ದಾಖಲಿಸಲಾಗಿದೆ. ಈ ಸಭೆಯಲ್ಲಿ ನಾವುಗಳು ಯಾವುದೇ ತಿರ್ಮಾನ ತೆಗೆದುಕೊಳ್ಳುವದಿಲ್ಲ, ಈ ಸಭೆಯ ಉದ್ದೇಶ ಸಾರ್ವಜನಿಕರ ಅಭಿಪ್ರಾಯ ಹಾಗೂ ಸಲ್ಲಿಸಿರುವ ಮೌಖಿಕ ಮತ್ತು ಲಿಖಿತ ಅಭಿಪ್ರಾಯಗಳನ್ನು ಸಂಗ್ರಹಿಸಿ, ಹಾಗೂ ತಾವುಗಳು ಸಲ್ಲಿಸಿರುವ ಮನವಿಗಳು, ಹೆಚ್ಚಿನ ಸಂಖ್ಯೆಯ ಲಿಖಿತ ಅಭಿಪ್ರಾಯಗಳು/ ಸಲಹೆಗಳು/ಆಕ್ಷೇಪಣೆಗಳನ್ನು ಸ್ವೀಕರಿಸಿದ್ದೇವೆ. ಅದನ್ನು ದಾಖಲಿಸಲಾಗುವುದು. ಈ ಸಭೆಯ ನಡವಳಿಯನ್ನು ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ದಾಖಲಿಸಿ, ಛಾಯಾಚಿತ್ರಗಳ (ಪ್ರತಿಯನ್ನು ಅನುಬಂಧ-7 ರಲ್ಲಿ ಲಗತ್ತಿಸಲಾಗಿದೆ) ವಿಡಿಯೋ ಇರುವ ಸಿ.ಡಿ. ಗಳ (ಪ್ರತಿಯನ್ನು ಅನುಬಂಧ-8 ರಲ್ಲಿ ಲಗತ್ತಿಸಲಾಗಿದೆ) ಇದನ್ನು ರಾಜ್ಯ ಮಟ್ಟದ ಪರಿಸರ ಅಘಾತ ಅಧ್ಯಯನ ಪ್ರಾಧಿಕಾರ, ಅರಣ್ಯ, ಜೀವಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು. ಇವರಿಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಕೇಂದ್ರ ಕಛೇರಿ ಬೆಂಗಳೂರು ಇವರು ಮುಖಾಂತರ ಕಳುಹಿಸಿಕೊಡಲಾಗುವದು ಎಂದು ತಿಳಿಸಿದರು.

ಈ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಂಡ ಎಲ್ಲಾ ಸಾರ್ವಜನಿಕರಿಗೆ ಮತ್ತು ಸುತ್ತಮುತ್ತಲಿನ ಗ್ರಾಮಸ್ಥರಿಗೆ ಧನ್ಯವಾದಗಳನ್ನು ತಿಳಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಿದರು.

ಶ್ರೀ ಕೆ.ರಾಜು
ಹಿರಿಯ ಪರಿಸರ ಅಧಿಕಾರಿ(ಪ್ರಭಾರ)
ಕ.ರಾ.ಮಾ.ನಿ.ಮಂ.ವಲಯ ಕಛೇರಿ, ಬಳ್ಳಾರಿ.

ಶ್ರೀ ಪಿ.ಎಸ್.ಮಂಜುನಾಥ, ಕ.ಆ.ಸೇ(ಹಿರಿಯ ಶ್ರೇಣಿ)
ಅಪರ ಜಿಲ್ಲಾಧಿಕಾರಿಗಳು ಹಾಗೂ ಬಳ್ಳಾರಿ ಅಪರ
ಜಿಲ್ಲಾ ದಂಡಾಧಿಕಾರಿಗಳು, ಅಧ್ಯಕ್ಷರು
ಜಿಲ್ಲಾ ಪರಿಸರ ಸಾರ್ವಜನಿಕ ಆಲಿಕೆ
ಸಮಿತಿ, ಬಳ್ಳಾರಿ

# ಅನುಬಂಧ

1. ಪರಿಸರ ಸಾರ್ವಜನಿಕ ಆಲಿಕೆ ಸಭೆಗೆ ಭಾಗವಹಿಸಿದ ಅಧಿಕಾರಿಗಳ ಸಹಿ ಇರುವ ಹಾಜರಾತಿ ವಹಿಯ ಪ್ರತಿಯನ್ನು **ಅನುಬಂಧ-1** ರಲ್ಲಿ ಲಗತ್ತಿಸಲಾಗಿದೆ.

2. ಪರಿಸರ ಸಾರ್ವಜನಿಕ ಆಲಿಕೆ ಸಭೆಗೆ ಭಾಗವಹಿಸಿದ ಸಾರ್ವಜನಿಕರ ವಿಳಾಸ ಮತ್ತು ಸಹಿ ಇರುವ ಹಾಜರಾತಿ ವಹಿಯ ಪ್ರತಿಯನ್ನು **ಅನುಬಂಧ-2** ರಲ್ಲಿ ಲಗತ್ತಿಸಲಾಗಿದೆ.

3. ರಾಜ್ಯ ಮಟ್ಟದ ಪ್ರಮುಖ ದಿನ ಪತ್ರಿಕೆಗಳಾದ ಪ್ರಜಾವಾಣಿ (ಕನ್ನಡ) ಹಾಗೂ ದಿ ಹಿಂದು (ಆಂಗ್ಲ) ಗಳಲ್ಲಿ ದಿನಾಂಕ 14-08-2021 ರಂದು ಪತ್ರಿಕಾ ಪ್ರಕಟಣೆ ಬಳ್ಳಾರಿ ಜಿಲ್ಲೆಯ ಸ್ಥಳೀಯ ದಿನಪತ್ರಿಕೆಯಾದ "ಕನ್ನಡ ನಾಡು" ಪತ್ರಿಕೆಯಲ್ಲಿ ದಿನಾಂಕ: 16-08-2021 ರಂದು ಪರಿಸರ ಸಾರ್ವಜನಿಕ ಆಲಿಕೆ ಸಭೆ ಕುರಿತಾದ ಪ್ರಕಟಣೆಯ ಪ್ರತಿಯನ್ನು **ಅನುಬಂಧ-3** ರಲ್ಲಿ ಲಗತ್ತಿಸಲಾಗಿದೆ.

4. ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಪ್ರಚಾರಕ್ಕಾಗಿ ದಿನಾಂಕ 09-09-2021 ಮತ್ತು 13-09-2021 ರಂದು ಕರಪತ್ರಗಳನ್ನು ವಿತರಿಸಲಾದ ಮತ್ತು ಧ್ವನಿವರ್ಧಕಗಳ ಮುಖೇನ ಯೋಜನಾ ಸ್ಥಳದ ಸುತ್ತಮುತ್ತಲ ಗ್ರಾಮಗಳಲ್ಲಿ ಸಾರ್ವಜನಿಕವಾಗಿ ಪ್ರಚಾರ ಮಾಡಲಾದ ಸಮಯದಲ್ಲಿ ತೆಗೆದುಕೊಂಡ ಛಾಯಾಚಿತ್ರಗಳ ಪ್ರತಿಯನ್ನು **ಅನುಬಂಧ-4** ರಲ್ಲಿ ಲಗತ್ತಿಸಲಾಗಿದೆ.

5. ಮಾನ್ಯ ಜಿಲ್ಲಾಧಿಕಾರಿಗಳು, ಬಳ್ಳಾರಿ ರವರ ಅಧಿಕೃತ ಜ್ಞಾಪನಾ ಪತ್ರದ ದಿನಾಂಕ 13-09-2021 ರ ಅನ್ವಯ ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ಬಳ್ಳಾರಿ ರವರಿಗೆ ಅಧಿಕಾರ ನೀಡಿ ದಿನಾಂಕ : 14-09-2021 ರಂದು ನಡೆಯುವ ಪರಿಸರ ಆಲಿಕೆ ಸಭೆಯನ್ನು ನಡೆಸಲು ಆದೇಶಿಸಿರುತ್ತಾರೆ. ಸದರಿ ಜ್ಞಾಪನಾ ಪತ್ರದ ಪ್ರತಿಯನ್ನು **ಅನುಬಂಧ-5** ರಂತೆ ಲಗತ್ತಿಸಿದೆ.

6. ಸಾರ್ವಜನಿಕರಿಂದ ಪ್ರಾದೇಶಿಕ ಕಛೇರಿ ಬಳ್ಳಾರಿಯಲ್ಲಿ ಒಟ್ಟು 19 ಲಿಖಿತ ಹೇಳಿಕೆ/ ಆಕ್ಷೇಪಣೆಗಳು ಸ್ವೀಕೃತಿಯಾಗಿದ್ದು, ಪರಿಸರ ಸಾರ್ವಜನಿಕ ಸಭೆಯ ಸಮಯದಲ್ಲಿ ಒಟ್ಟು 38 ಲಿಖಿತ ಹೇಳಿಕೆ/ ಆಕ್ಷೇಪಣೆಗಳು ಸ್ವೀಕೃತಿಯಾಗಿರುತ್ತವೆ ಅವುಗಳನ್ನು **ಅನುಬಂಧ-6** ರಲ್ಲಿ ಲಗತ್ತಿಸಲಾಗಿದೆ.

7. ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಪ್ರಕ್ರಿಯೆಯ ಛಾಯಾಚಿತ್ರಗಳ ಪ್ರತಿಯನ್ನು **ಅನುಬಂಧ-7** ರಲ್ಲಿ ಲಗತ್ತಿಸಲಾಗಿದೆ.

8. ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಆಡಿಯೋ ಮತ್ತು ವಿಡಿಯೋ ಇರುವ ಸಿ.ಡಿ. ಗಳ ಪ್ರತಿಯನ್ನು **ಅನುಬಂಧ-8** ರಲ್ಲಿ ಲಗತ್ತಿಸಲಾಗಿದೆ.

ಶ್ರೀ ಕೆ.ರಾಜು
ಹಿರಿಯ ಪರಿಸರ ಅಧಿಕಾರಿ(ಪ್ರಭಾರ)
ಕ.ರಾ.ಮಾ.ನಿ.ಮಂ.ವಲಯ ಕಛೇರಿ, ಬಳ್ಳಾರಿ.

**ಶ್ರೀ ಪಿ.ಎಸ್.ಮಂಜುನಾಥ, ಕ.ಆ.ಸೇ(ಹಿರಿಯ ಶ್ರೇಣಿ)**
ಅಪರ ಜಿಲ್ಲಾಧಿಕಾರಿಗಳು ಹಾಗೂ ಬಳ್ಳಾರಿ ಅಪರ ಜಿಲ್ಲಾ ದಂಡಾಧಿಕಾರಿಗಳು, ಅಧ್ಯಕ್ಷರು
ಜಿಲ್ಲಾ ಪರಿಸರ ಸಾರ್ವಜನಿಕ ಆಲಿಕೆ ಸಮಿತಿ, ಬಳ್ಳಾರಿ